

ಕೊಡಗಿನ
ಗಡಿ ಭಾಗದಲ್ಲಿ ಕಂಡು ಬರುವ
ಭೂತ ಪೂಜೆ



ಯೆರಗುಪ್ಪಿಯ
ಮೊಹರಂ ಉತ್ಸವದಲ್ಲಿ
ಬಸವಣ್ಣ ದೇವಸ್ಥಾನದಲ್ಲಿ ನಡೆಯುವ
ಡೋಲಿ ಪೂಜೆ

ಪ್ರಶ್ನೆಗಳು ಎದುರಾದಂತೆಲ್ಲ ಜಾತ್ರೆಗಳು ನಮಗೆ ಯಾಕೆ ಮುಖ್ಯ ಅನ್ನುವುದನ್ನು ಯೋಚಿಸಬೇಕಾಯಿತು. ಆ ಚಿಂತನೆಯ ಹಿಂದೆ ಬಿದ್ದಾಗ ನನಗೆ ಕಂಡಿದ್ದು ಒಂದು ಅದ್ಭುತವಾದ ಜಗತ್ತು! ಕನ್ನಡ ಸಾಹಿತ್ಯ ಜಗತ್ತಿನ ದಿಗ್ಗಜರು ಬರೆದ ಪುಸ್ತಕಗಳನ್ನು ಸ್ವಲ್ಪ ಅಧ್ಯಯನ ಮಾಡಿದಾಗ ನನಗೆ ಮೊದಲು ಅನ್ನಿಸಿದ್ದು, ನನ್ನ ಜೀವನಪರ್ಯಂತ ಓಡಾಡಿ ಚಿತ್ರ ತೆಗೆದರೂ ಇದನ್ನು ಪೂರ್ಣಗೊಳಿಸಲು ಅಸಾಧ್ಯ ಅನ್ನುವುದು. ನಮ್ಮ ಇಂದಿನ ನಾಗರಿಕ ಜೀವನದ ಬಹುಮುಖ್ಯ ಅಡಿಪಾಯ ಈ ಜಾನಪದ ಆಚರಣೆಗಳು. 'ವಿಜ್ಞಾನ' ಅನ್ನುವ ಪದ ನಮ್ಮ ಸಾಮಾಜಿಕ ಜೀವನವನ್ನು ಬದಲಾಯಿಸತೊಡಗಿದ್ದು ಕೇವಲ ಇತ್ತೀಚೆಗೆ ಮಾತ್ರ. ಅದಕ್ಕೂ ಮುನ್ನ ಒಬ್ಬ ಶ್ರಮಜೀವಿ ರೈತನಿರಲಿ ಅಥವಾ ಒಬ್ಬ ಬಡ ಬ್ರಾಹ್ಮಣನಿರಲಿ ಅಥವಾ ಹಲವು ರೀತಿಯ ಜೀವನಕ್ರಮಗಳಲ್ಲಿ ತೊಡಗಿಕೊಂಡಿರುವ ಬೇರೆ ಬೇರೆ ವರ್ಗದ ಜನರ ಸಾಮಾಜಿಕ ಜೀವನದಲ್ಲಿ ಒಂದು ಮುಖ್ಯವಾದ ಪಾತ್ರ ವಹಿಸಿದ್ದು, ಅವರ ಬದುಕಿನ ಚಲನೆಗೆ ಕಾರಣವಾಗುವುದು ಈ ಆಚರಣೆಗಳು, ಈ ಜಾತ್ರೆಗಳು.

ಇಲ್ಲಿಂದ ಆರಂಭಿಸಿದ ನನಗೆ ಒಂದು ವಿಶಿಷ್ಟ ಜಗತ್ತಿನ ಪರಿಚಯ ಮತ್ತು ಅದರ ಜೊತೆಗಿನ ಸಂಬಂಧ ಬೆಳೆಯುತ್ತ ಹೋಯಿತು. ಮೊದಮೊದಲಿಗೆ ಬೆಂಗಳೂರು, ರಾಮನಗರ, ಸುತ್ತಮುತ್ತಲಿನ ದನದ ಜಾತ್ರೆಗಳಲ್ಲಿ ಓಡಾಡಿ ಅನುಭವವಾದ ಮೇಲೆ, ಬೆಂಗಳೂರಿನ ಕರಗ, ಕಡ್ಲೆಕಾಯಿ ಪರಿಷೆಯಂತಹ ಪಟ್ಟಣದ ಜಾತ್ರೆಗಳು ಸ್ವಲ್ಪ ಬೇಸರ ತರಿಸಿದವು. ಹಲವು ಪುಸ್ತಕಗಳು, ಮಾರ್ಗದರ್ಶಕರ ಸಹಾಯದಿಂದ ದೊಡ್ಡ ದೊಡ್ಡ ಜಾತ್ರೆಗಳ, ಚಿಕ್ಕದಾದರೂ ಅತಿ ವಿಶಿಷ್ಟವಾದ ಜಾತ್ರೆಗಳ ವಿವರಗಳನ್ನು ಸಂಗ್ರಹಿಸಿ ಸಂಚರಿಸತೊಡಗಿದೆ. ಆಗೊಮ್ಮೆ ಈಗೊಮ್ಮೆ ಅವಕಾಶ ಸಿಕ್ಕಿದಾಗೆಲ್ಲ, ಕೆಲವೊಮ್ಮೆ ಅವಕಾಶ ಮಾಡಿಕೊಂಡು ರಾಜ್ಯದಲ್ಲೆಲ್ಲ ತಿರುಗುವುದು



ಉತ್ತರ
ಕರ್ನಾಟಕದಲ್ಲಿ ಸಾಮಾನ್ಯವಾಗಿ
ಕಂಡುಬರುವ ಮೊಹರಂ ಜಾತ್ರೆಯ
ಕೆಂಡ ಹಾಯುವ ಕ್ಷಣ